ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ 1, 2, 5 ಮತ್ತು 6 ರವರ ಪರ ಶ್ರೀ ಎ ಎಸ್ ವಕೀಲರಿಂದಃ

ದಿನಾಂಕಃ27.12.2010 ರಂದು ನೀಡಿದೆ ಎನ್ನಲಾದ ಕ್ರಯದ ಮುಂಗಡ ಹಣವನ್ನು ಪ್ರತಿವಾದಿಯವರಿಗೆ ನೀಡುವ ಸಮಯ ಚೋಳೂರಯ್ಯ, ಗಂಗಾಧರ್, ನವೀನ್ ಕುಮಾರ್ ರವರು ಹಾಜರಿದ್ದು 3 ಜನರೂ ಸಹ ಕರಾರು ಪತ್ರದಲ್ಲಿ ಸಹಿ ಮಾಡಿರುತ್ತಾರೆ. ಸದರಿ ದಿನಾಂಕದಂದು ನೀಡಿದೆ ಎನ್ನಲಾದ ಕ್ರಯದ ಮುಂಗಡ ಹಣವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಚೋಳೂರಪ್ಪ ಮತ್ತು ಅವರ ಇಬ್ಬರು ಮಕ್ಕಳು ಹಣದ ಅಗತ್ಯ ಇರುವುದರಿಂದ ಹಣ ಬೇಕಾಗಿದೆ ಎಂದು ಕೇಳಿರುತ್ತಾರೆ ಆದುದ್ದರಿಂದ ಸದರಿ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಈ ಹಿಂದೆಯೇ ಸಾಕಷ್ಟು ಹಣ ಪ್ರತಿವಾದಿಯರಿಗೆ ನೀಡಿದ್ದರೂ ಸಹ ಪುನಃ ನೀವು ಏಕೆ ಕೇಳುತ್ತಿದ್ದೀರಿ ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿಯು ಅವರನ್ನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದ ಹಣವನ್ನು ಪ್ರತಿವಾದಿಯರಿಗೆ ನೀಡುವ ಸಮಯ ಅವರಿಗೆ ಏಕೆ ಹಣದ ಅವಶ್ಯಕತೆ ಇರುತ್ತದೆ ಎಂದು ಕಾರಣವನ್ನು ಕೇಳಿರುವುದಿಲ್ಲ, ಸಾಕ್ಷಿಗೆ ನೀವು ಹೇಳುವ ರೀತಿಯಲ್ಲಿ ಅವರಿಗೆ ಯಾವುದೇ ಹಣದ ಅವಶ್ಯಕತೆ ಇಲ್ಲದೇ ಇದ್ದರೂ ಸಹ ಮತ್ತು ಅವರು ಯಾವುದೇ ಹಣವನ್ನು ಕೇಳಿರುವುದೂ ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ರೂ.1 ಲಕ್ಷ 37 ಸಾವಿರ ಹಣದಲ್ಲಿ ರೂ.25 ಸಾವಿರ ಹ ಣವನ್ನು ಚೆಕ್ ಮೂಲಕ ಉಳಿದ ಹಣವನ್ನು ನಗದು ಮೂಲಕ ನೀಡಲಾಗಿತ್ತು.

ನಗದುಹಣವನ್ನು ಯಾವ ಮುಖಬೆಲೆಯ ನೋಟುಗಳಿಂದ ನೀಡಲಾಗಿತ್ತು ಎಂದರೆ ಸಾಕ್ಷಿಯು ಈಗ ಅದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ರೂ.1,37000 ಹಣವನ್ನು ಒಂದು ವಾರದ ಹಿಂದೆಯೇ ಕೇಳಿದ್ದರು ನಂತರ ಆ ಹಣವನ್ನು ನೀಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಮ್ಮ ನೋಟಿಸಿನಲ್ಲಾಗಲೀ, ವಾದ ಪತ್ರದಲ್ಲಾಗಲೀ ಮತ್ತು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ರೂ.1,37,000 ಹಣವನ್ನು ಪ್ರತಿವಾದಿಗಳು ಪಡೆದುಕೊಂಡ ಬಗ್ಗೆ ವ್ಯವಹಾರವು ಅಂದಾಜು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಡೆದಿರುತ್ತದೆ. ನಾನು ಹೇಳುತ್ತಿರುವ ಮಾಹಿತಿಯು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂದಪಟ್ಟಂತೆ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಸ್ವತ್ತಿಗೆ ದಾರಿ ಮಾಡಿಕೊಳ್ಳಲು ಕಾಲಾವಕಾಶವನ್ನು ಪ್ರತಿವಾದಿಗಳು ಕೇಳಿದ ಬಗ್ಗೆ ನನ್ನ ವಾದಪತ್ರದಲ್ಲಿ ತಿಳಿಸಿದ್ದು ಆ ಬಗ್ಗೆ ಕಾರಾರು ಪತ್ರದಲ್ಲಿ ಹೇಳಿರುವುದಿಲ್ಲ. ನಾನು ಹೇಳುವಂತೆ ದಾವಾ ಸ್ವತ್ತಿಗೆ ದಾರಿಯನ್ನು ಮಾಡುವ ಪ್ರಮೇಯ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಲುವಾಗಿ ಸದರಿ ಸುಳ್ಳು ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ28.02.2011 ರಂದು ಪ್ರತಿವಾದಿ 3 ರವರು ನಮ್ಮ ಬಳಿ ಡಿಮ್ಯಾಂಡ್ ಮಾಡಿ 30 ಸಾವಿರ ರೂಗಳನ್ನು ಪಡೆದು ಕೊಂಡಿದ್ದರು ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿದ್ದು ಆ ಬಗ್ಗೆ ಕರಾರುಪತ್ರದಲ್ಲಿ ಷರಾ ಬರೆಸಿಕೊಂಡಿರುತ್ತೇವೆ. ಸಾಕ್ಷಿಯು ನಿಪಿ-1 ಪುಟ ಸಂಖ್ಯೆಃ14 ರ ಹಿಂಬದಿಯ ಕೊನೆಯಭಾಗದಲ್ಲಿ ಬರೆಯಲಾಗಿರುತ್ತದೆ ಎಂದು ನಿಪಿ-1 ನೋಡಿ ನುಡಿಯುತ್ತಾರೆ. ಪ್ರತಿವಾದಿ-3 ಯಾರು ಎಂದು ನನಗೆ ತಿಳಿದಿರುತ್ತದೆ. ಅವರ ಹೆಸರು ನವೀನ್ ಕುಮಾರ್. ಪ್ರತಿವಾದಿ-3 ನವೀನ್ ಕಮಾರ್ ಅಲ್ಲ ಸಾವಿತ್ರಮ್ಮ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.